
ಬದುಕಿನ ಕೆಲ ಸಂದರ್ಭಗಳಲ್ಲಾದರೂ ಮನುಷ್ಯನಿಗೆ ಎದುರಿಗಿರುವವರ ಅಂತರಂಗವನ್ನು ನೋಡಬಲ್ಲ ಒಳಗಣ್ಣಿರಬಾರದಿತ್ತೇ ಎನಿಸಿತು.

★★★

''ಹೇಳೀ ಕೇಳೀ ಅದು ರುಕ್ಮಿಣಿ ಚಿಕ್ಕಮ್ಮ. ತಾವೇ ಏನೋ ಮಾಡಿ ಅಪ್ಪನ ಬಿಪಿಯನ್ನು ಹೆಚ್ಚು ಮಾಡಿದ್ದರೂ ಒಪ್ಪಿಕೊಳ್ಳಲ್ಲ. ವಿಷಯ ತಿಳಿಯೋದಕ್ಕೆ ಬೇರೇನಾದರೂ ಉಪಾಯ ಹುಡುಕಬೇಕು.''

ಮಂದಾರ ಹಾಗೆಂದಾಗ ನಾನು ಮತ್ತೆ ಯೋಚನೆಗೆ ಬಿದ್ದೆ. ರುಕ್ಮಿಣಿ ಅತ್ತೆ ಏನೂ ಇಲ್ಲ ಎನ್ನುತ್ತಿದ್ದಾರೆ. ಆದರೆ, ಏನೋ ಇದೆ ಎಂದು ಅವರ ಕಣ್ಣು ಹೇಳುತ್ತಿದೆ. ಅದೇನೆಂದು ಹೇಗೆ ತಿಳಿದುಕೊಳ್ಳುವುದು?



''ಮಾವನಿಗೆ ಮೊದಲ ಬಾರಿಗೆ ಹುಷಾರು ತಪ್ಪಿದಾಗ ಮಾಧವ ಮಾವ ಹಾಗೂ ರುಕ್ಮಿಣಿ ಅತ್ತೆಯ ಹೊರತಾಗಿ ಅವರ ಜೊತೆ ಮತ್ಯಾರಿದ್ದರು?''

ಮುಂಗುರುಳು ಕೆದರಿ ಹರಡಿಕೊಂಡಿದ್ದ ಮಂದಾರಳ ನಿಸ್ತೇಜ ಮುಖವನ್ನೇ ನೋಡುತ್ತಾ ಕೇಳಿದೆ. ಸತತ ಐದು ದಿನಗಳ ಆಸ್ಪತ್ರೆ ವಾಸ ಅವಳ ಮುಖದಲ್ಲಿ ಆಯಾಸವಾಗಿ ಮಡುಗಟ್ಟಿತ್ತು.

''ಇರಲೇ ಬೇಕು. ಇದ್ದರು ಸಹಾ. ಎಪ್ಪತ್ತೈದು ಕೇಜಿ ತೂಗುವ ಅಪ್ಪನನ್ನ ಗೊಚ್ಚೆ ತುಂಬಿದ ಅಂಗಳದುದ್ದಕ್ಕೂ ಹೊತ್ತುಕೊಂಡು ಹೋಗಿ, ಅಂಗಳದಾಚೆಗಿನ ಆಂಬುಲೆನ್ಸ್‌ಗೆ ತುಂಬಿಸುವುದು ಬರೀ ಚಿಕ್ಕಪ್ಪ ಚಿಕ್ಕಮ್ಮನಿಗೆ ಸಾಧ್ಯವಾಗುವ ಕೆಲಸವಲ್ಲ. ಪಕ್ಕದ ಮನೆಯ ಸೀನಣ್ಣನೂ ಜೊತೆ ಸೇರಿಕೊಂಡಿದ್ದಾನೆ. ಇನ್ನು ಬಸವನ ಜೊತೆಗಿನ ಬಾಲದಂತೆ ಸೀನಣ್ಣನ ಹಿಂದೇ ಬರುವ ಅವನ ಪುಟ್ಟ ಮಗ ಅನಿಕೇತನೂ ಜೊತೆಗಿದ್ದಿರಬಹುದು.''

ಮಂದಾರ ಹಾಗೆಂದಾಗ ನನ್ನ ಕಣ್ಣುಗಳು ಹೊಳೆದವು. ಮಾವನಿಗೆ ಬಿಪಿ ಮತ್ತೆ ಹೆಚ್ಚುವಂತೆ ಏನಾದರೂ ಕೊಟ್ಟರಾ? ಎಂದು ಸೀನಣ್ಣನನ್ನು ಕೇಳಲಾಗುವುದಿಲ್ಲ, ಆದರೆ ತಪ್ಪು ಒಪ್ಪುಗಳ ಭೇದ ತಿಳಿಯದ ಅವನ ಮಗ ಅನಿಕೇತನನ್ನು ಕೇಳಬಹುದು!

★★★

''ನಾನಿ ಮಾಮಂಗೆ, ರುತ್ಮಿನಿ ಚಿಕ್ಕಿ ಉಪ್ಪು ನೀದು ಕುದಿಸಿದ್ಲು! ಅದು ಕುದಿದ ಚ್ವಲ್ಪ ಹೊತ್ತಿಗೇ ಮಾಮಂಗೆ ಹಲದಿ ವಾಂತಿ ಆಯ್ತು! ಹಾಗಂತ ಅಪ್ಪ ಹೇಳ್ತಿದ್ದ!''

ಏನೇನೋ ಉಪಾಯ ಮಾಡಿ, ಏನೇನೋ ಕಥೆ ಹೇಳಿ, ಕಾಗೆ ಗುಬ್ಬಿ ತೋರಿಸಿ ನಾನು ಕೇಳಿದ ಪ್ರಶ್ನೆಗೆ ಕೊನೆಗೂ ಅನಿಕೇತ ಈ ಉತ್ತರ ನೀಡಿದಾಗ ನಾನು ಸ್ತಂಭೀಭೂತನಾದೆ. ಬಿಪಿ ಹೆಚ್ಚಿ ಸ್ಟ್ರೋಕಾದ ವ್ಯಕ್ತಿಗೆ ಉಪ್ಪು ನೀರು ಕುಡಿಸುವುದು!

ಕೊಲೆಗೆ ಪರ್ಯಾಯವಾಗಿ ಬಳಸಬಹುದಾದ ಈ ಕೆಲಸದ ಹೆಸರು ಕೇಳಿದೊಡನೆಯೇ ನನ್ನ ಮೈ ನಡುಗಿತು. ಇಳಿದು ಏರಿದ ಬಿಪಿ, ಅತ್ತೆಯ ಮುಖದಲ್ಲಿನ ಆತಂಕ, ಮಾಧವ ಮಾವನ ಅಸಹಜ ಮೌನ... ಇವೆಲ್ಲದರ ಹಿಂದಿನ ರಹಸ್ಯ ಈಗ ಬಯಲಾಗಿತ್ತು. ಸ್ಥಳೀಯ ಡಾಕ್ಟರ ಮದ್ದಿನಿಂದ ಇಳಿಮುಖವಾಗಿದ್ದ ಬಿಪಿಗೆ ಬಳಿಕ ಕೊಟ್ಟ ಉಪ್ಪು ನೀರು ಪ್ರವಾಹಗತಿಯ ಚಲನೆಯನ್ನು ಕೊಟ್ಟಿತ್ತು.